## HEAVY INDUSTRIES IN HOSANAGAR TOWN

35. Sri S. M. SHEERANALY CHANDRASHEKAR (Hosanagar).—

Will the Minister for Industries be pleased to state:—

(*a*) whether it has come to the notice of Government that surrounding villages of Hosanagar Town have been submerged with the result that the Town has lost its economic stability;

(*b*) if so, whether there is any proposal before Government to set up some Government sponsored Heavy Industries in the Town?

Sri S. M. KRISHNA (Minister for Industries).—

(*a*) No.

(*b*) Does not arise in view of reply to clause (*a*).

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಈ ವಿಚಾರವನ್ನು ಮಂತ್ರಿಗಳ ಗಮನಕ್ಕೆ ತಂದಿದೆ. ಅಲ್ಲದೆ ತಮ್ಮ ಇಲಾಖೆಯವರು ಎರಡುಮೂರು ದಿನ ಹೊಸನಗರದಲ್ಲಿ ಕ್ಯಾಂಪು ಮಾಡಿ ವರದಿಮಾಡಿದ್ದಾರೆ. ರಾಮೆಟೀರಿಯಲ್ಸ್‌ಗೆ ಸಹ ಸದವಕಾಶವಿದೆ. ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ?

†ಶ್ರೀ ಎಸ್. ಎಂ. ಕೃಷ್ಣ.—ಇಲಾಖೆ ಅಧಿಕಾರಿಗಳು ಹೋಗಿ ಸರ್ವೆ ಮಾಡುವ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ಅವರೇನು ಅಭಿಪ್ರಾಯ ಸೂಚಿಸುವರೋ ಅದನ್ನು ಮಾನ್ಯ ಸದಸ್ಯರಿಗೆ ತಿಳಿಸಲಾಗುವುದು. ನಂತರ ಅಲ್ಲಿರುವ ಕೈಗಾರಿಕೋದ್ಯಮಿಗಳು ಅರ್ಜಿ ಹಾಕಿದರೆ ಕೈಗಾರಿಕೆಗಳನ್ನು ಸ್ಥಾಪಿಸಲು ಏನೆಲ್ಲಾ ಸಹಾಯ ಸಹಕಾರ ಸರಕಾರ ಕೊಡಬೇಕೋ ಅದನ್ನು ಕೊಡುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಹೊಸನಗರ ತಾಲ್ಲೂಕ್ ಕೊಡಚಾದ್ರಿ ಸಮೀಪದಲ್ಲಿ ಅತ್ಯುತ್ಕೃಷ್ಟವಾದ ಮ್ಯಾಗ್ನೆಟೈಟ್ ಸಿಕ್ಕುತ್ತದೆ ಎಂದು ತಿಳಿದುಬಂದಿರುವುದರಿಂದ ಅಲ್ಲಿ ಸರ್ಕಾರದ ವತಿಯಿಂದ ಒಂದು ಕಾರ್ಖಾನೆಯನ್ನು ಸ್ಥಾಪಿಸುವುದಕ್ಕೆ ಆಲೋಚನೆಮಾಡುತ್ತೀರಾ?

ಶ್ರೀ ಎಸ್. ಎಂ ಕೃಷ್ಣ.—ನಮ್ಮ ಸರ್ಕಾರದ ವತಿಯಿಂದ ಸ್ಥಾಪನೆ ಮಾಡುವುದಕ್ಕೆ ಸಂಪನ್ಮೂಲಗಳ ಅಭಾವವಿರುವುದರಿಂದ, ಸರ್ಕಾರಧಪರು ರಾಜ್ಯದಲ್ಲಿ ಕೈಗಾರಿಕೆಯನ್ನು ಬೆಳೆಸ ಬೇಕಾಗಿರುವುದರಿಂದ ಅದರ ಸ್ಥಾಪನೆಗೇನು ಸಹಾಯ ಬೇಕೋ ಅದನ್ನು ಕೊಡುವುದಕ್ಕೆ ಸಿದ್ಧರಿದ್ದಾರೆ. ಶ್ರೀ ಕೋಣಂದೂರು ಲಿಂಗಪ್ಪನವರು ಈಗಾಗಲೇ ನನ್ನಲ್ಲಿ ಮಾತನಾಡಿ ತಿಳಿಸಿರುವಂತೆ ಅಲ್ಲಿ ಕೆಲವರು ಹಣವಂತರೂ, ಧನಿಕರೂ ಇರುತ್ತಾರೆಂದು ಹೇಳಿದ್ದಾರೆ. ಅವರನ್ನು ಮಾನ್ಯ ಸದಸ್ಯರು ಈ ಕೈಗಾರಿಕೆಯನ್ನು ತೆಗೆಯುತಕ್ಕ ಜಾಡಿಗೆ ಇಳಿಸಿದರೆ ಇದರಿಂದ ರಾಜ್ಯಕ್ಕೆ ಒಂದು ಮಹದುಪಕಾರವಾಗುತ್ತದೆ.

## COPPER PROJECT IN CHITRADURGA

56. Sri B. SATYANARAYANA SINGH (Hospet).—

Will the Minister for Industries be pleased to state:—

(a) the estimated cost of the Copper Mining Project of Chitradurga:

(*b*) the expenditure incurred on the said project so far;

(*c*) the progress achieved so far;

(*d*) when is the Project expected to be completed?

Sri S. M. KRISHNA (Minister for Industries).—

(*a*) Rs. 180 lakhs.

(*b*) Rs. 85 lakhs.

(*c*) Drilling exploration has revealed a promising ore body of copper extending for nearly a mile in length. The average grade of the ore is 2 per cent.

In order to exploit the deposit exploratory mining was started and to date 4,600 meters of underground development has been carried out and sufficient ore for two years operation has been blocked out.

Simultaneously benefication tests for recovering copper concentrates have been carried out both in India and abroad and based on these test results a copper concentrator has been designed for treating 250 tons of ore per day and producing 20 tons of copper concentrates containing 25 per cent Cu.

(*d*) Order for the erection of the concentrator plant was placed on M/s. McNally—Bird & Co. Nearly 70 per cent of the work has been completed and the Plant is expected to go into production by March 1973. The progress of work is as per schedule.

ಶ್ರೀ ಬಿ. ಸತ್ಯನಾರಾಯಣಸಿಂಗ್.—ಪ್ರಯೋಗಾತ್ಮಕ ಕಂಡಿ ಕೊರೆದಿರುವುದರಿಂದ ನಮಗಾರು ಒಂದು ಮೈಲುದ್ದವರೆಗೂ ವಿಶೇಷಗುಣವಿಳ್ಳ ತಾಮ್ರದ ಅದುರು ಸಿಕ್ಕುತ್ತದೆ ಎನ್ನುವುದಾಗಿ ಕಂಡುಬಂದಿದೆ ಎಂದು ಉತ್ತರದಲ್ಲಿ ತಿಳಿಸಿದೆ. ಅಂದರೆ ಇದರ ಇನ್‌ವೆಸ್ಟಿಗೇಷನ್ ಇಲ್ಲಿಗೆ ಮುಗಿಯಿತೋ ಅಥವಾ ಇನ್ನೂ ಇದೆಯೋ?

†ಶ್ರೀ ಎಸ್. ಎಂ. ಕೃಷ್ಣ.— ಚಿತ್ರದುರ್ಗ ಜಿಲ್ಲೆಯ ಇಂಗಳದಾಳ್ ಬಳಿ ಬಹಳ ಮುಖ್ಯವಾದ ಮತ್ತು ಬಹಳ ಅವಶ್ಯಕವಾದ ತಾಮ್ರದ ಅದುರು ಸಿಕ್ಕುತ್ತದೆ ಎಂಬುದಾಗಿ ಇಲ್ಲಿ ಕಳೆದ 3-4 ವರ್ಷಗಳಲ್ಲಿ ನಡೆಸಿದ ಅನ್ವೇಷಣೆಯಿಂದ ಗೊತ್ತಾಗಿದೆ. ಅದರ ಬಗ್ಗೆ ಇಲ್ಲಿಯವರೆಗೂ ಸರ್ಕಾರ 85 ಲ ರೂಪಾಯಿಗಳನ್ನು ಖರ್ಚುಮಾಡಿದೆ. 1973ನೇ ಮಾರ್ಚಿಯ ಹೊತ್ತಿಗೆ ಕಾನ್‌ಸೆಂಟ್ರೇಟರ್ ಪ್ಲಾಂಟ್‌ನ್ನು ಹಾಕತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ.

ಶ್ರೀ ಬಿ. ಸತ್ಯನಾರಾಯಣಸಿಂಗ್.—ಅದುರಿನ ಬೆಡ್ ಇನ್‌ವೆಸ್ಟಿಗೇಷನ್ ಕೆಲಸ ಪೂರ್ತಿ ಆಗಿದೆಯೇ ಅಥವಾ ಇನ್ನೂ ಇದೆಯೇ ಎಂಬುದು ನಾನು ಕೇಳಿದ ಪ್ರಶ್ನೆ?

ಶ್ರೀ ಎಸ್. ಎಂ. ಕೃಷ್ಣ.—ಅದು ಸದಾ ನಡೆಯುತ್ತಲೇ ಇರತಕ್ಕ ಕೆಲಸ.